156 (242) ಶ್ರೀ ಸಿಂಧೂರ ಬಿ ರಾಜಶೇಖರ (ಶಿಗ್ಗಾಂವ್) ಮಾನ್ಯ. ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಶಿಂಗ್ಗಾಂವ್–ಸವಣೂರ ತಾಲ್ಲೂಕುಗಳಲ್ಲಿ ಅಂತರ ಜಲ ಮಟ್ಟ ಕುಸಿದಿದ್ದು, ನೀರಿನ ಪ್ರಮಾಣ ಕಡಿಮೆ ಇರುವುದರಿಂದ, ಕಡಿಮೆ ನೀರನ್ನು ಉಪಯೋಗಿಸಿ ತೋಟಗಾರಿಕೆ ಬೆಳೆಯನ್ನು ಬೆಳೆಯಲಿಕ್ಕೆ ಇಸ್ರೇಲ್ ತಂತ್ರಜ್ಞಾನದತ್ತ ಯೋಜನೆಯಡಿಯಲ್ಲಿ ಶಿಗ್ಗಾಂವ–ಸವಣೂರ ತಾಲ್ಲೂಕು ಸೇರದೇ ಇರುವುದು ಸರ್ಕಾರದ ಗಮನದಲ್ಲಿದೆಯೇ ,

ಆ) ಹಾಗಿದ್ದಲ್ಲಿ, ಸವಣೂರ ತಾಲ್ಲೂಕು ಈಗಾಗಲೇ ಬರ ಪೀಡಿತ ಪ್ರದೇಶ ಎಂದು ಘೋಷಿಸಿದ್ದು, ಇಸ್ರೇಲ್ ತಂತ್ರಜ್ಞಾನ ದತ್ತ ಯೋಜನೆಯಡಿಯಲ್ಲಿ ತೋಟಗಾರಿಕಾ ಬೆಳೆಗಳನ್ನು ಬೆಳೆಯಲಿಕ್ಕೆ ರೈತ ಸಮುದಾಯಕ್ಕೆ ಹೆಚ್ಚಿನ ಅನುಕೂಲ ಮಾಡಿಕೊಡಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳುವುದು

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ್ (ತೋಟಗಾರಿಕಾ ಸಚಿವರು)

ಅ) ಹೌದು

ಆ) ಸವಣೂರ ತಾಲ್ಲೂಕನ್ನು ಇಸ್ರೇಲಿ ತಂತ್ರಜ್ಞಾನ ಯೋಜನೆಯಡಿ ತರುವ ಉದ್ದೇಶ ಈ ಸಧ್ಯದಲ್ಲಿ ಇರುವುದಿಲ್ಲ

157 (243) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಶಿಗ್ಗಾಂವ್ – ಸವಣೂರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಗ್ರಾಮೀಣ ರಸ್ತೆ ನಿರ್ಮಾಣಕ್ಕಾಗಿ ಅನುದಾನ ಬಿಡುಗಡೆಗೊಳಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಇಲ್ಲದಿದ್ದಲ್ಲಿ ಶ್ರೀ ನಂಜುಂಡಪ್ಪ ವರದಿ ಆಧಾರದ ಮೇಲೆ ಶಿಗ್ಗಾಂವ – ಸವಣೂರ ತಾಲ್ಲೂಕುಗಳು ಹಿಂದುಳಿದ ತಾಲ್ಲೂಕುಗಳಾಗಿರುವುದರಿಂದ ಗ್ರಾಮೀಣ ಮಟ್ಟದ ರಸ್ತೆಗಳು ಹಾಳಾಗಿದ್ದು ಈ ರಸ್ತೆಗಳನ್ನು ಸರಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ,

ಇ) ಕಳೆದ ಮೂರು ವರ್ಷದಲ್ಲಿ ಶಿಗ್ಗಾಂವ್–ಸವಣೂರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ನಿರ್ಮಿಸಿದ ಕಾರ್ಯಗಳು ಹಾಗೂ ಕಾಮಗಾರಿಗಳೇನು (ಮಾಹಿತಿ ಒದಗಿಸುವುದು)

ಈ) ಶಿಗ್ಗಾಂವ್ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅವಧಿ ಯಾವಾಗ ಮುಗಿಯುತ್ತದೆ ,

ಉ) ಈ ಸಮಿತಿಗೆ ಚುನಾವಣೆ ನಡೆಸಲು ಸರ್ಕಾರ ತೀರ್ಮಾನಿಸಿದೆಯೇ ,

ಊ) ಆಗಿದ್ದಲ್ಲಿ, ಯಾವಾಗ ಚುನಾವಣೆ ನಡೆಸಲಾಗುವುದು ?

ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು)

ಅ) ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಸರ್ಕಾರವು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಅನುದಾನ ನೀಡುವ ಯೋಜನೆ ಯಾವುದು ಇರುವುದಿಲ್ಲ ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ನಿಯಮಗಳು 1968ರ ನಿಯಮ 60(ಸಿ) ರಡಿಯಲ್ಲಿ ಸಮಿತಿಗಳ ವತಿಯಿಂದ ಗ್ರಾಮೀಣ ಸಂಪರ್ಕ ರಸ್ತೆಗಳನ್ನು ಅಬಿವೃದ್ಧಿಪಡಿಸಲು ಅವಕಾಶವಿದ್ದು, ಪ್ರಸ್ತಾಪಿತ ಸಮಿತಿಗಳಲ್ಲಿ ಆರ್ಥಿಕ ಸಂಪನ್ಮೂಲ ಕೊರತೆಯಿಂದಾಗಿ ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಮಂಜೂರಾತಿ ನೀಡಿರುವುದಿಲ್ಲ

ಆ) ಅನ್ವಯಿಸುವುದಿಲ್ಲ

ಇ) ಸವಣೂರು

ಆರ್ಥಿಕ ಸಂಪನ್ಮೂಲ ಕೊರತೆಯಿಂದಾಗಿ ಸಮಿತಿಯ ಕ್ರಿಯಾ ಯೋಜನೆಗಳನ್ನು ಮಂಜೂರು ಮಾಡಿರುವುದಿಲ್ಲ.

ಶಿಗ್ಗಾಂವ

ವರ್ಷ	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)
2003–04	ಆಡಳಿತ ಕಛೇರಿ ಕಟ್ಟಡ ನಿರ್ಮಾಣ	4 00
2004–05	ಮೈಕ್ರೋ ಮೇನೇಜ್‌ಮೆಂಟ್ ಯೋಜನೆ ಯಡಿಯಲ್ಲಿ 2 ಗೋದಾಮುಗಳ ನಿರ್ಮಾಣ	10 00
2005–06	ಆವರಣ ಗೋಡೆ ನಿರ್ಮಾಣ	10 00
2005–06	ಎನ್ ಜಿ ಆರ್ ಜಿ ಗೋದಾಮು ದುರಸ್ತಿ	2 00

ಈ) ದಿನಾಂಕ 15–02–2006ಕ್ಕೆ ಅವಧಿ ಮುಕ್ತಾಯವಾಗಿರುತ್ತದೆ

ಉ) ಹೌದು

ಊ) ರಾಜ್ಯದ 126 ತಾಲ್ಲೂಕ್‌ಗಳನ್ನು ಬರಪೀಡಿತ ಪ್ರದೇಶಗಳೆಂದು ಸರ್ಕಾರವು ಘೋಷಿಸಿರುವ ಹಿನ್ನೆಲೆಯಲ್ಲಿ ಸರ್ಕಾರವು ತನ್ನ ಆದೇಶ ದಿನಾಂಕ 20–12–2006 ರಲ್ಲಿ ಶಿಗ್ಗಾಂವ್ ಸಮಿತಿಗೆ ಚುನಾವಣೆಯನ್ನು ಮುಂದಿನ ಮುಂಗಾರಿನ ನಂತರ ಅಂದರೆ 2007ನೇ ಸೆಪ್ಟೆಂಬರ್ ನಂತರ ನಡೆಸಲು ಆದೇಶಿಸಲಾಗಿದೆ

158 (433) ಶ್ರೀ ಕೆ ಶ್ರೀನಿವಾಸ ಗೌಡ (ಕೋಲಾರ) ಮಾನ್ಯ ತೋಟಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಕೋಲಾರ ಜಿಲ್ಲೆಯಲ್ಲಿ ಆಲೂಗೆಡ್ಡೆ ಬೆಳೆಗೆ ಅಂಗಮಾರಿರೋಗ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಈ ರೋಗದಿಂದ ಜಿಲ್ಲೆಯಾದ್ಯಂತ ಎಷ್ಟು ಎಕರೆ ಕೃಷಿ ಜಮೀನಿನಲ್ಲಿ ಬೆಳೆ ರೋಗ ತಗುಲಿ ಬೆಳೆ ನಾಶವಾಗಿದೆ ,

ಇ) ಈ ರೋಗದಿಂದ ಬೆಳೆನಾಶವಾದುದಕ್ಕೆ ರೈತರಿಗೆ ಪರಿಹಾರ ನೀಡಲಾಗಿದೆಯೇ ,

ಈ) ಹಾಗಿದ್ದಲ್ಲಿ, ಎಕರೆವಾರು ಪರಿಹಾರ ನೀಡಿರುವುದೆಷ್ಟು (ತಾಲ್ಲೂಕುವಾರು ಮಾಹಿತಿ ನೀಡುವುದು) ?

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ್ (ತೋಟಗಾರಿಕಾ ಸಚಿವರು)

ಅ) ಹೌದು

ಆ) ಅಂದಾಜು 4,500 ಹೆಕ್ಟೇರ್ ಪ್ರದೇಶದಲ್ಲಿ ರೋಗ ತಗುಲಿದೆ

ಇ) ತೋಟಗಾರಿಕೆ ಇಲಾಖೆಯ ವತಿಯಿಂದ ಬೆಳೆ ನಾಶಕ್ಕೆ ಪರಿಹಾರ ನೀಡಲು ಅವಕಾಶ ಇರುವುದಿಲ್ಲ

ಈ) ಉದ್ಭವಿಸುವುದಿಲ್ಲ

159 (263) ಶ್ರೀ ಶ್ರೀರಾಮರೆಡ್ಡಿ ಜಿ ವಿ (ಬಾಗೇಪಲ್ಲಿ) ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,